**ಓ.ಎಸ್. ನಂ. 151/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 27.3.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಮೂರು ಗಣಕೀಕೃತ ಪಹಣಿಗಳನ್ನು ನಿಪಿ3 ರಿಂದ ನಿಪಿ5 ಎಂದು, ನನ್ನ ತಾತನ ಮರಣ ಪ್ರಮಾಣಪತ್ರವನ್ನು ನಿಪಿ6 ಎಂದು, ಮಾಹಿತಿ ಹಕ್ಕು ಅಡಿ ಪಡೆದುಕೊಂಡ ದಿನಾಂಕ 30.10.2024 ರಂದು ಹೆಚ್.ಡಿ.ಕೋಟೆ ಪೋಲಿಸ್ ಠಾಣೆಗೆ ನೀಡಿರುವ ಅರ್ಜಿ, ಎರಡು ಹೇಳಿಕೆಗಳು, ಹಿಂಬರಹ ಮತ್ತು ಸ್ವೀಕೃತಿಯನ್ನು ನಿಪಿ7 ರಿಂದ ನಿಪಿ11 ಎಂದು, ದಿನಾಂಕ 4.2.2025 ರಂದು ಹೆಚ್.ಡಿ.ಕೋಟೆ ಪೋಲಿಸರು ನೀಡಿರುವ ಹಿಂಬರಹವನ್ನು ನಿಪಿ12 ಎಂದು, ದಿನಾಂಕ 17.12.2022 ರಂದು ಜಿಲ್ಲಾಧಿಕಾರಿಗೆ ನೀಡಿರುವ ಮನವಿಯ ಪ್ರತಿಯನ್ನು ನಿಪಿ13 ಎಂದು, ದಿನಾಂಕ 17.11.2024 ರಂದು ಜಿಲ್ಲಾಧಿಕಾರಿಗೆ ನೀಡಿರುವ ಮನವಿಯ ಪ್ರತಿಯನ್ನು ನಿಪಿ14 ಎಂದು, ದಿನಾಂಕ 11.2.2025 ರಂದು ಎ.ಸಿ ಹುಣಸೂರು ಇವರಿಗೆ ನೀಡಿರುವ ಮನವಿಯ ಪ್ರತಿಯನ್ನು ನಿಪಿ15 ಎಂದು, ದಿನಾಂಕ 12.11.2024 ರಂದು ತಹಶೀಲ್ದಾರ್, ಹೆಚ್.ಡಿ.ಕೋಟೆ ಇವರಿಗೆ ನೀಡಿರುವ ಮನವಿಯ ಪ್ರತಿಯನ್ನು ನಿಪಿ16 ಎಂದು, ದಿನಾಂಕ 25.12.2022 ರಂದು ತಹಶೀಲ್ದಾರ್, ಹೆಚ್.ಡಿ.ಕೋಟೆ ಇವರು ನೀಡಿರುವ ಹಿಂಬರಹವನ್ನು ನಿಪಿ17 ಎಂದು, ಮಾಹಿತಿ ಹಕ್ಕು ಅಡಿಯಲ್ಲಿ ದಿನಾಂಕ 27.3.2023 ರಂದು ಪಡೆದುಕೊಂಡ ಹನ್ನೆರೆಡು ಡಿಮ್ಯಾಂಡ್ ರಿಜಿಸ್ಟರ್ ಮತ್ತು ಅದಕ್ಕೆ ಲಗತ್ತಿಸಿದ ಪತ್ರವನ್ನು ನಿಪಿ18 ರಿಂದ ನಿಪಿ30 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಲಿಖಿತ ಹೇಳಿಕೆ ಸಲ್ಲಿಸದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.